# ಕರ್ನಾಟಕ ವಿಧಾನ ಪರಿಷತ್ತು



| | | |
|---|---|---|
| 1) | ಚುಕ್ಕೆಗುರುತಿಲ್ಲದಪ್ರಶ್ನೆಸಂಖ್ಯೆ | : 21 |
| 2) | ಸದಸ್ಯರಹೆಸರು | : ಶ್ರೀ. ಸುನೀಲ್ ವಲ್ಯಾಪುರ್ |
| 3) | ಉತ್ತರಿಸಬೇಕಾದದಿನಾಂಕ: | : 13.02.2024 |
| 4) | ಉತ್ತರಿಸುವವರು | : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗದಗ –ವಾಡಿ ರೈಲು ಮಾರ್ಗ ನಿರ್ಮಾಣ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಹಾಗೂ ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; | ಗದಗ-ವಾಡಿ (257 ಕಿ.ಮೀ) ನೂತನ ರೈಲು ಮಾರ್ಗ ಯೋಜನೆಯನ್ನು ರಾಜ್ಯ ಸರ್ಕಾರವು ಕೇಂದ್ರ ರೈಲ್ವೆ ಮಂತ್ರಾಲಯದೊಂದಿಗೆ 50:50ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಮಾಡಿಕೊಂಡು ನಿರ್ಮಿಸುತ್ತಿದೆ. ಈ ಯೋಜನೆಗೆ ಅಗತ್ಯವಿರುವ ಜಮೀನಿನ ಸಂಪೂರ್ಣ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ.<br><br>ಈ ಯೋಜನೆಯನ್ನು ನೈರುತ್ಯ ರೈಲ್ವೆಯಿಂದ ಅನುಷ್ಠಾನಗೊಳಿಸುತ್ತಿದ್ದು, ನೈರುತ್ಯ ರೈಲ್ವೆಯಿಂದ ಪಡೆದ ಮಾಹಿತಿ ಅನುಸಾರ ಈ ಯೋಜನೆಯ ಪ್ರಗತಿಯ ವಿವರ ಈ ಕೆಳಕಂಡಂತಿದೆ.<br><br>• ತಳಕಲ್ - ಹನುಮಾಪುರ (35 ಕಿ.ಮೀ) ಕಾಮಗಾರಿ ಪೂರ್ಣಗೊಂಡಿದ್ದು ರೈಲು ಸೇವೆ ಆರಂಭಗೊಂಡಿದೆ.<br>• ಹನುಮಾಪುರ - ಕುಷ್ಟಗಿ (21 ಕಿ.ಮೀ) ಕಾಮಗಾರಿ ಪ್ರಗತಿಯಲ್ಲಿದ್ದು, 2023-24ನೇ ಸಾಲಿನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಲಾಗಿದೆ.<br>• ಶಹಾಪುರ-ವಾಡಿ (44 ಕಿ.ಮೀ) ಮತ್ತು ಕುಷ್ಟಗಿ-ಜುಮ್ಮಾಪುರ (20 ಕಿ.ಮೀ) ಕಾಮಗಾರಿಯು ಪ್ರಗತಿಯಲ್ಲಿದೆ.<br>• ಈ ಯೋಜನೆಗೆ ಅಗತ್ಯವಿರುವ ಶೇ.98ರಷ್ಟು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಾಗಿ ಟೆಂಡರ್ ಕರೆಯಲು ಕ್ರಮ ವಹಿಸಲಾಗುತ್ತಿದೆ.<br>• 2026-27ರ ವೇಳೆಗೆ ಯೋಜನೆಯನ್ನು ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ. |
| (ಆ) | ಸದರಿ ರೈಲು ಮಾರ್ಗದಲ್ಲಿ ವಾಡಿಯಿಂದ ಎಷ್ಟು ಕಿಲೋಮೀಟರ್ ಮಾರ್ಗವು | ತಳಕಲ್ - ಹನುಮಾಪುರ (35 ಕಿ.ಮೀ) ಕಾಮಗಾರಿ ಪೂರ್ಣಗೊಂಡಿದೆ ಹಾಗೂ ವಿವಿಧ ಸೆಕ್ಷನ್‌ಗಳಲ್ಲಿನ 85 |

| | | |
|---|---|---|
| | ಪೂರ್ಣಗೊಂಡಿದೆ; | ಕಿ.ಮೀ ಉದ್ದದ ಕಾಮಗಾರಿ ಪ್ರಗತಿಯಲ್ಲಿದೆ. |
| (ಇ) | ಸದರಿ ರೈಲು ಮಾರ್ಗ ನಿರ್ಮಾಣಕ್ಕೆ ಎಷ್ಟು ಎಕರೆ ಭೂ-ಪ್ರದೇಶದ ಅಗತ್ಯವಿದೆ; ಹಾಗೂ ಸದರಿ ಕಾಮಗಾರಿಗೆ ಎಷ್ಟು ಎಕರೆ ಭೂಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ; | ಈ ಯೋಜನೆಗೆ ಅಂದಾಜು 4038.17 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದ್ದು ಈವರೆಗೆ 3891.33 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.<br><br>ತೀರ ಇತ್ತೀಚೆಗೆ ರೈಲ್ವೆ ಇಲಾಖೆಯಿಂದ ಹೊಸದಾಗಿ 147.45 ಎಕರೆಗಳ ಭೂಸ್ವಾಧೀನಕ್ಕಾಗಿ ಕೋರಿಕೆಯನ್ನು ಸಲ್ಲಿಸಲಾಗಿರುತ್ತದೆ.<br><br>ಅದರಲ್ಲಿ 57.04 ಎಕರೆಗಳ ಭೂಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. 50.25 ಎಕರೆ ಭೂಮಿಯ ಸ್ವಾಧೀನಕ್ಕಾಗಿ ಜೆಎಂಸಿ ಕಾರ್ಯ ಪ್ರಗತಿಯಲ್ಲಿದೆ. 40.16 ಎಕರೆ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತಿದೆ. |
| (ಈ) | ಭೂ-ಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ರೈತರುಗಳಿಗೆ ನೀಡಿದ ಪರಿಹಾರಧನವೆಷ್ಟು; (ವಿವರ ನೀಡುವುದು) | ಈವರೆಗೆ ಸ್ವಾಧೀನಪಡಿಸಿಕೊಂಡಿರುವ 3891.33 ಎಕರೆಗಳ ಜಮೀನಿಗಾಗಿ ರೂ.406.90 ಕೋಟಿಗಳ ಭೂ-ಪರಿಹಾರಧನ ಪಾವತಿಸಲಾಗಿದೆ. |
| (ಉ) | ಗದಗ –ವಾಡಿ ರೈಲು ಮಾರ್ಗ ನಿರ್ಮಾಣ ಕಾಮಗಾರಿಗೆ ತಗಲುವ ಸಂಪೂರ್ಣ ವೆಚ್ಚ ಎಷ್ಟು; ಅದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಭರಿಸಬೇಕಾದ ಮೊತ್ತದ ಪ್ರಮಾಣವೆಷ್ಟು? (ಸಂಪೂರ್ಣ ವಿವರ ನೀಡುವುದು) | ಈ ಯೋಜನೆಯ ಕಾಮಗಾರಿಯ ಒಟ್ಟು ಅಂದಾಜು ಮೊತ್ತ ರೂ.1922.14 ಕೋಟಿಗಳಾಗಿದ್ದು, ಇದರಲ್ಲಿ ರೈಲ್ವೆ ಇಲಾಖೆಯ ಪಾಲು ರೂ.961.07 ಕೋಟಿಗಳು ಹಾಗೂ ರಾಜ್ಯ ಸರ್ಕಾರದ ಪಾಲು ರೂ.961.07 ಕೋಟಿಗಳಾಗಿರುತ್ತದೆ. ಇದರೊಂದಿಗೆ ಈ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ವೆಚ್ಚವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸುತ್ತಿದೆ. |

ಸಂಖ್ಯೆ: ಮೂಅಇ 28 ರಾರಾಹೆ 2024/ಇ

(ಎಂ.ಬಿ.ಪಾಟೀಲ)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.